ಕರ್ನಾಟಕ ರಾಜ್ಯ ಪತ್ರಾಗಾರ,101
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಪ್ರಸ್ತಾವನೆ ಸಂಖ್ಯೆ 639 ದಿನಾಂಕ 21.2.93

ಬಳ್ಳಾರಿ	55.00
ರಾಯಚೂರು	45.00
ಒಟ್ಟು	250.00

ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಒಡ್ಡುಗಳ ನಿರ್ಮಾಣ

68 (796) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೊಲ್ಲಿತೋಡು ಗ್ರಾಮದಲ್ಲಿ ಸಾವಿರಾರು ಎಕರೆ ಗದ್ದೆ ವ್ಯವಸಾಯವಾಗದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಹಿಂದೆ ಈ ಬಗ್ಗೆ ಒಡ್ಡು ತೆಗೆಸಲು ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಮತ್ತು ಆ ಪೈಕಿ ಎಷ್ಟು ಹಣ ವೆಚ್ಚವಾಯಿತು ಮತ್ತು ಆಯವ್ಯಯದಲ್ಲಿ ಒದಗಿಸಿದ್ದ ಹಣವೆಷ್ಟು ?

ಡಾ।। ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಗೊತ್ತಿದೆ

ಆ) ಈ ಸ್ಥಳದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಕೈಗೊಳ್ಳಲು ರೂ. 49.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, 93-94ನೇ ಸಾಲಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

1991-92ನೇ ಸಾಲಿನ ಆಯವ್ಯಯದಲ್ಲಿ 0.50 ಲಕ್ಷ ರೂ.ಗಳನ್ನು ಮತ್ತು 1992-93ನೇ ಸಾಲಿನಲ್ಲಿ ರೂ. 12.00 ಲಕ್ಷಗಳನ್ನು ಒದಗಿಸಲಾಗಿದ್ದು ಈ ಪೈಕಿ ಯಾವುದೇ ಹಣ ವೆಚ್ಚ ಮಾಡಿರುವುದಿಲ್ಲ.

ಸುರ್ಗಿತೋಪು ಏತ ನೀರಾವರಿ ಯೋಜನೆ

71 (828) ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):-

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುರ್ಗಿತೋಪು 'ಏತ ನೀರಾವರಿ' (ಮಳವಳ್ಳಿ ತಾಲ್ಲೂಕು) ಯೋಜನೆ ಕೆಲಸ ಈಗ ಯಾವ ಹಂತದಲ್ಲಿದೆ, ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು;

ಆ) ಇಷ್ಟು ಮಂದಗತಿಯಲ್ಲಿ ನಡೆಯಲು ಕಾರಣವೇನು, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ವಿಲ್ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿವೆ. ಈವರೆಗೆ 29.50 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಪಂಪ್ ಹೌಸ್, ಶಾಲೆಗಳು, ನೌಕರರ ವಸತಿಗೃಹಗಳು ಮತ್ತು ತೊಟ್ಟಿಗಳು

ಇವುಗಳ ಕೆಲಸಗಳು ಮುಗಿದಿದ್ದು ಶಾಲೆಯ ಲೈನಿಂಗ್ ಕಾರ್ಯವು ಮುಗಿಯುವ ಹಂತದಲ್ಲಿದೆ. ರೈಸಿಂಗ್ ಮೈನ್ ಮತ್ತು ಯಂತ್ರೋಪಕರಣಗಳನ್ನು ಜೋಡಣೆ ಮಾಡಬೇಕಾಗಿದೆ. ಸದರಿ ಯೋಜನೆಯನ್ನು 1994–95ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಮೂಲ ಅಂದಾಜಿನಲ್ಲಿ 1500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಲಾಗಿದ್ದು ನಂತರ ಸ್ಥಳೀಯರ ಮನವಿಯ ಮೇರೆಗೆ ಪರಿಶೀಲಿಸಿ 250 ಎಕರೆ ಅಚ್ಚುಕಟ್ಟನ್ನು ಈ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ಅಳವಡಿಸಲಾಯಿತು. ಈ ಕಾರಣದಿಂದ ಮೂಲ ಯೋಜನೆಯಲ್ಲಿ ಮಂಜೂರಾಗಿದ್ದ ನೀರೆತ್ತುವ ಪಂಪಿನ ಸಾಮರ್ಥ್ಯ, ರೈಸಿಂಗ್ ಮೈನ್, ನಾಲೆಯ ಸೆಕ್ಷನ್‌ಗಳನ್ನು ಬದಲಾಯಿಸಬೇಕಾಗಿ ಬಂದು 250 ಎಕರೆ ಹೆಚ್ಚುವರಿ ಅಚ್ಚುಕಟ್ಟಿಗೆ ನೀರು ಸರಬರಾಜು ಮಾಡಲು ಒಂದು ಉಪನಾಲೆಯ ಅವಶ್ಯಕತೆ ಕಂಡುಬಂದಿತು. ಈ ಮೇಲೆ ನಮೂದಿಸಿರುವ ಕಾರಣಗಳಿಂದ ಮತ್ತು ವಿನ್ಯಾಸಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ಕಾಮಗಾರಿಯ ಪ್ರಗತಿಯು ಧಾನವಾಯಿತು.

ವಿ.ಸಿ. ನಾಲೆಯ ಆಧುನೀಕರಣ

72 (825) ಶ್ರೀ ಎಮ್.ಎಸ್. ಆತ್ಮಾನಂದ (ಮಂಡ್ಯ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಕಾಮಗಾರಿಯ ಪ್ರಸ್ತಾವೆಯನ್ನು ರೈತರ ಹಿತದೃಷ್ಟಿಯಿಂದ ಕಾರ್ಯಗತ ಮಾಡಬೇಕಾಗಿರುವ ಅವಶ್ಯಕ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಅನುಷ್ಠಾನದ ಬಗ್ಗೆ ಸರ್ಕಾರವು ಈವರೆಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು

ಆ) ವಿ.ಸಿ. ನಾಲೆಯ ಆಧುನೀಕರಣದ ಎರಡನೇ ಹಂತದ ಅಂಗವಾಗಿ ಹೊಳಲು ಮತ್ತು ಮಾರ್ಕಾಲು ಪಿಕ್‌ಅಪ್ ಮತ್ತು ನಾಲೆಗಳ ಅಭಿವೃದ್ಧಿ ಕೆಲಸವನ್ನು ಪ್ರಾರಂಭಿಸಲಾಗಿದೆ.

ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸದಿರುವುದು

75 (449) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕಿನ ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸುವ ಕಾರ್ಯ ಸುಮಾರು ಒಂದು ದಶಕದಿಂದ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಬಾಗಿಲುಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡರೆ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ;

ಇ) ಇನ್ನೂ ಎಷ್ಟು ದಿನಗಳಲ್ಲಿ ಈ ಕೆಲಸ ಮುಗಿಸಿ ರೈತರಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ ?